
# ಪೀಟರ್ ಹ್ಯಾಂಡ್‌ಕೇ: ಪ್ರಶಸ್ತಿಗೆ ವ್ಯಾಪಕ ಟೀಕೆ



2019ನೇ ಸಾಲಿನ ನೊಬೆಲ್ ಸಾಹಿತ್ಯ ಪ್ರಶಸ್ತಿಯನ್ನು 76ರ ಹರಯದ ಪೀಟರ್ ಹ್ಯಾಂಡ್‌ಕೇಗೆ ಕೊಡಲಾಗಿದೆ. ಮೂಲತಃ ಜರ್ಮನಿಯ, ಆಸ್ಟ್ರಿಯನ್ ಕಾದಂಬರಿಕಾರ, ನಾಟಕಕಾರ, ಅನುವಾದಕ, ಕವಿ, ಸ್ಕ್ರಿಪ್ಟ್ ಬರಹಗಾರ, ಸಿನಿಮಾ ನಿರ್ದೇಶಕ ಕೂಡ ಆಗಿರುವ ಹ್ಯಾಂಡ್‌ಕೇ ಇದುವರೆಗೂ 'ಶಾರ್ಟ್ ಲೆಟರ್– ಬಿಗ್ ಫೇರ್‌ವೆಲ್', 'ದ ಗೋಲೀಸ್ ಎಂಗ್ಸೈಟೀ ಅಟ್ ದ ಪೆನಾಲ್ಟಿ ಕಿಕ್', 'ಎ ಸಾರೋ ಬಿಯಾಂಡ್ ಡ್ರೀಮ್ಸ್', 'ಟಿಲ್ ಡೇ ಯು ಪಾರ್ಟ್ ಆರ್ ಅ ಕ್ವೆಶ್ಚನ್ ಆಫ್ ಲೈಟ್' ಮತ್ತು 'ಸ್ಲೋ ಹೋಮ್ ಕಮಿಂಗ್' ಮುಂತಾದ ಕೃತಿಗಳನ್ನು ಬರೆದಿದ್ದಾರೆ.

ಆದರೆ, ಸ್ವೀಡಿಶ್ ಅಕಾಡೆಮಿಯು ಪೀಟರ್ ಹ್ಯಾಂಡ್ಕೇಗೆ ಘೋಷಿಸಿದ ಈ ಪ್ರಶಸ್ತಿ ವ್ಯಾಪಕ ಟೀಕೆಗೆ ಗುರಿಯಾಗಿದೆ. ಬಾಲ್ಕನ್ ಕದನದ ಸಂದರ್ಭದಲ್ಲಿ ಸಾವಿರಾರು ಅಲ್ಬೇನಿಯನ್ನರ ಹತ್ಯೆಗೂ, ಲಕ್ಷಾಂತರ ಮಂದಿ ದೇಶ ಬಿಟ್ಟು ಹೋಗುವುದಕ್ಕೂ ಕಾರಣವಾದ ಸರ್ಬಿಯಾದ ಅಧ್ಯಕ್ಷ ಮಿಲೊಸೆವಿಕ್‌ನ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದಲ್ಲದೆ ಆತನ ವಿಚಾರಣೆ ಇನ್ನೂ ಪ್ರಗತಿಯಲ್ಲಿರುವಾಗಲೇ ಸತ್ತ ಅವನನ್ನು ಸಮರ್ಥಿಸಿಕೊಂಡಂತೆ ಮಾತನಾಡಿದ ವ್ಯಕ್ತಿ ಎನ್ನುವ ಕಾರಣಕ್ಕೆ ಹ್ಯಾಂಡ್‌ಕೆಗೆ ಪ್ರಶಸ್ತಿ ನೀಡಿದ್ದು ಸರಿಯಿಲ್ಲ ಎನ್ನುವ ನಿಲುವು ಅನೇಕರಲ್ಲಿದೆ.

ಪ್ರಶಸ್ತಿ ಬಂದಿರುವುದು ತನಗೂ ಆಶ್ಚರ್ಯವೇ ಎಂದಿರುವ ಹ್ಯಾಂಡ್‌ಕೇ ವಿವಾದದ ಬಗ್ಗೆ ಅದೆಲ್ಲ ಮುಗಿದ ಅಧ್ಯಾಯ ಎಂದಷ್ಟೇ ಪ್ರತಿಕ್ರಿಯಿಸಿದ್ದಾರೆ.